(6ನೇ ಪುಟದಿಂದ)

ಸದಾ ಅಚಲವಾಗಿ ನಿಂತುಕೊಂಡಿದ್ದು, ಕಾಲಚಕ್ರವನ್ನು ಕರಾರುವಾಕ್ಕಾಗಿ ನಿಯಂತ್ರಿಸುತ್ತದೆ ಎಂಬುದರ ಸೂಚನೆಯೇ ಗರ್ಬಾ ನೃತ್ಯ.

ಅಬಾಲವೃದ್ಧರಾದಿಯಾಗಿ, ಹೆಣ್ಣು– ಗಂಡು, ಬಡವ– ಬಲ್ಲಿದ ಭೇದವಿಲ್ಲದೆ, ವರ್ಣಮಯ ದಿರಿಸನ್ನು ಧರಿಸಿ ಭವ್ಯ ದೀಪಾಲಂಕಾರಗಳಿಂದ ಸಜ್ಜುಗೊಳಿಸಿದ ಬೃಹದಾಕಾರದ ಮೈದಾನಗಳಲ್ಲಿ ಜಾನಪದ ಹಾಡುಗಳಿಗೆ ಮೈ–ಮನ ಮರೆತು ಹೆಜ್ಜೆ ಇಡುತ್ತಾರೆ ಈ ನರ್ತಕರು.

ಸಾಮಾನ್ಯವಾಗಿ ಈ ಜಾನಪದ ಹಾಡುಗಳಲ್ಲಿ ಪೌರಾಣಿಕ ಕಥೆಗಳಾದ ರಾಧಾ–ಕೃಷ್ಣ–ಗೋಪಿಕೆಯರ ಕಥೆ, ಪಾರಂಪರಿಕ, ಐತಿಹಾಸಿಕ ಗತವೈಭವವನ್ನು ಸಾರುವ ಅಂಶಗಳಿರುತ್ತವೆ. ಕಸೂತಿ ಕಲೆಗಳಿಂದ ಕಣ್ಣು ಕೋರೈಸುವ ಚಣಿಯಾ– ಚೋಲಿಯನ್ನು ಹುಡುಗಿಯರು ಧರಿಸಿ, ಮೇಲೆ ರಂಗುರಂಗಿನ ದುಪಟ್ಟಾ ಹೊದ್ದಿರುತ್ತಾರೆ. ಸಲ್ವಾರ್ ಕಮೀಜಿನ ಪ್ಯಾಂಟಿನೋಪಾದಿಯಲ್ಲಿ ಚಣಿಯಾ ಧರಿಸಿದರೆ, ಮೇಲೆ ಚೋಲಿಯನ್ನು ಧರಿಸಿರುತ್ತಾರೆ. ಈ ಚೋಲಿಯನ್ನು ಬಣ್ಣಬಣ್ಣದ ಹವಳ, ಸಿಂಪು, ಶಂಖ, ಚಿಕ್ಕ ಕನ್ನಡಿ, ನಕ್ಷತ್ರಾಕಾರದ ಮಿಂಚುವ ತೆಳು ಲೋಹದ ಬಿಲ್ಲೆ, ಮಾಟಿ, ಕಸೂತಿ ಕಲೆ ಇತ್ಯಾದಿಗಳಿಂದ ಅಲಂಕರಿಸಿರುತ್ತಾರೆ. ವಿವಿಧ ಬಗೆಯ ನೆಕ್ಲೇಸ್, ಬೆಂಡೋಲೆ, ಬಾಜುಬಂಧ (ತೋಳಾಭರಣ), ಕಮರಬಂಧ (ಸೊಂಟಪಟ್ಟಿ), ಕಾಲ್ಚೈನು, ಕಾಲ್ಗೆಜ್ಜೆ, ಬಳೆ ಇತ್ಯಾದಿಗಳಿಂದ ಸಾಲಂಕೃತಗೊಳಿಸುತ್ತಾರೆ.







ಇತ್ತೀಚಿನ ದಿನಗಳಲ್ಲಿ ಗರ್ಭಾ ಮತ್ತು ದಾಂಡಿಯಾ ಎರಡರ ಸಮ್ಮಿಶ್ರ ನೃತ್ಯವಂತೂ ಅತ್ಯಂತ ಕಸುವುಳ್ಳ, ಓಜಸ್ಸಿನ ನೃತ್ಯವೆನಿಸುತ್ತದೆ. ಬಾಲಕರು ರಂಗುರಂಗಿನ ಕುರ್ತಾ ಪೈಜಾಮ, ತಲೆಗೆ ಪಗಡಿ, ಬಂಧಿನಿ, ದುಪಟ್ಟಾ ಧರಿಸಿ ಗರ್ಬಾ ನೃತ್ಯಕ್ಕೆ ಸಾಂಸ್ಕೃತಿಕ ಸಾಥ್ ನೀಡುವುದೂ ವಿಶೇಷ.

ಗರ್ಬಾಗಳಲ್ಲೇ ಅನೇಕ ಪ್ರಕಾರಗಳಿವೆ. ಶೇರಿ ಗರ್ಬಾ ಎಂದರೆ ಒಂದು ಓಣಿ ಅಥವಾ ಗಲ್ಲಿಯಲ್ಲಿಯ ಜನರು ಒಂದುಗೂಡಿ ತಮ್ಮ ಚಾಳಿನಲ್ಲಿ ನೇರವೇರಿಸುವ ನೃತ್ಯ ಪ್ರಕಾರ. ಸಮಾಜದ ಗರ್ಬಾ ಒಂದು ಒಳಪಂಗಡ; ಜನಾಂಗೀಯ ಗರ್ಬಾ ಒಂದು ಜನಾಂಗದವರೆಲ್ಲ ಸೇರಿ ನೆರವೇರಿಸುವ ಪ್ರತಿಭಾ– ಪ್ರದರ್ಶನ. ಸಂಘ ಸಂಸ್ಥೆಗಳ ಗರ್ಬಾ ಆಯಾ ಸಂಘ ಸಂಸ್ಥೆಗಳು ಸಡಗರದಿಂದ ನಡೆಸುವ ಪಾರಂಪರಿಕ ನೃತ್ಯವಾಗಿದೆ. ವೃತ್ತಿಪರ ಗರ್ಬಾ ಕ್ಲಬ್‌ಗಳಿಗೆ (ತಂಡಗಳಿಗೆ) ಕೂಡಾ ಇಲ್ಲಿ ಕೊರತೆಯಿಲ್ಲ. ಇವರು ದೊಡ್ಡ ಹೋಟೆಲ್, ಪಾರ್ಟಿಗಳಲ್ಲಿ ಆಹ್ವಾನದ ಮೇರೆಗೆ ನೃತ್ಯವನ್ನು ಮಾಡುತ್ತಾರೆ.

ಇದಲ್ಲದೆ ಶಾಲಾ ಕಾಲೇಜುಗಳೂ ತಮ್ಮ ಮೈದಾನಗಳಲ್ಲಿ ಗರ್ಬಾ ನೃತ್ಯದ ವ್ಯವಸ್ಥೆಯನ್ನು ಮಾಡಿ ಮಕ್ಕಳಿಗೆ, ಪಾಲಕರಿಗೆ ಗರ್ಬಾ ನೃತ್ಯದಲ್ಲಿ ಪಾಲ್ಗೊಳ್ಳಲು ಆಮಂತ್ರಿಸುವುದಿದೆ. ಸರಕಾರವೂ ವಿಶ್ವವಿದ್ಯಾಲಯ ಮೈದಾನದಲ್ಲಿ ಬೃಹತ್ ನೃತ್ಯಪ್ರದರ್ಶನ ಏರ್ಪಡಿಸುತ್ತದೆ.

ಅಹಮದಾಬಾದ್– ಗಾಂಧಿನಗರ ಅವಳಿ ನಗರವಲ್ಲದೆ, ಸಾಂಸ್ಕೃತಿಕ ನಗರಿಗಳಾದ ಬರೋಡಾ, ಸೂರತ್, ಜುನಾಗಢ್, ಜಾಮ್‌ನಗರ ಮತ್ತು ಭಾವ್‌ನಗರಗಳಲ್ಲಿಯೂ ಈ ನೃತ್ಯಗಳು ಜರುಗುತ್ತವೆ.